ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,

ಟಿ.ನರಸೀಪುರ

ಕ್ರಿ.ಮಿಸ್.ನಂ.**488/2024** ಪಿ.ಡಬ್ಲ್ಯೂ: **1**

ಸಾಕ್ಷಿಗೆ ದಿನಾಂಕ: **23.06.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| 01 | ಹೆಸರು | ಶಾರದ ಎಂ. |
| 02 | ಗಂಡನ ಹೆಸರು | ಎಂ.ಸಿ.ಮಹೇಶ್ ಕುಮಾರ್ |
| 03 | ವಯಸ್ಸು | 37 ವರ್ಷ |
| 04 | ಉದ್ಯೋಗ | ಗೃಹಿಣಿ |
| 05 | ಊರು | ಬನ್ನೂರು ಪಟ್ಟಣ |

ಮುಖ್ಯ ವಿಚಾರಣೆ ಅರ್ಜಿದಾರ ಪರ ಶ್ರೀ. ಬಿ.ಬಿ.ಎಂ ., ವಕೀಲರಿಂದ

ದಿನಾಂಕ.11.03.2018 ರಂದು ಮೈಸೂರು ಜಿಲ್ಲೆಯ ಯರಗನಹಳ್ಳಿ ಗ್ರಾಮದಲ್ಲಿರುವ ಗ್ಯಾಲಕ್ಸಿ ಕನ್ ವೆನ್ಷನ್ ಹಾಲ್ ನಲ್ಲಿ ನನ್ನ ಮತ್ತು ಎದುರುದಾರನ ವಿವಾಹವು ಗುರುಹಿರಿಯರು ಪೋಷಕರ ಸಮಕ್ಷಮ ನೆರವೇರಿರುತ್ತದೆ. ನನ್ನ ಗಂಡ ಮತ್ತು ಅವರ ಕುಟುಂಬದವರ ಬೇಡಿಕೆಯ ಮೇರೆಗೆ ನನ್ನ ಅಣ್ಣಂದಿರು ಸದರಿ ಕನ್ ವೆನ್ಷನ್ ಹಾಲ್ ನಲ್ಲಿ ಅದ್ದೂರಿಯಾಗಿ ನಮ್ಮ ವಿವಾಹವನ್ನು ಮಾಡಿರುತ್ತಾರೆ. ನಾನು ವಿವಾಹವಾದ ನಂತರ ಬೆಂಗಳೂರಿನ ಜೀವನ್ ಭೀಮ್ ನಗರದಲ್ಲಿರುವ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ನಂತರ ನಾನು ಗಂಡನ ಮನೆಯಲ್ಲಿ ವಾಸವಿದ್ದು, ಅಲ್ಲಿ ನಾನು ಗರ್ಭಿಣಿಯಾಗಿದ್ದು, ಅದಾದ ನಂತರ ನನ್ನ ಅತ್ತೆ ನನಗೆ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ನಾನು ಮನೆ ಕೆಲಸ ಮಾಡುವಾಗ, ಅಡುಗೆ ಮಾಡುವಾಗ, ಅನಾವಶ್ಯಕವಾಗಿ ಹಸ್ತಕ್ಷೇಪ ಮಾಡುತ್ತಿದ್ದರು. ಅದೇ ರೀತಿ ಅವರು ನನ್ನನ್ನು ವ್ಯಂಗ ಮಾಡುತ್ತಾ ಟೀಕಿಸುತ್ತಿದ್ದರು.

ದಿನಾಂಕ. 06.12.2018 ರಂದು ಮೈಸೂರು ಅಪೋಲೋ ಆಸ್ಪತ್ರೆಯಲ್ಲಿ ನಾನು ಗಂಡು ಮಗುವಿಗೆ ಜನ್ಮ ನೀಡಿರುತ್ತೇನೆ. ನಂತರ ಪದ್ಧತಿಯಂತೆ ತವರು ಮನೆಗೆ ನನ್ನ ಮತ್ತು ಮಗುವಿನ ಆರೈಕೆಗೆ ಹೋಗಿರುತ್ತೇನೆ. ನಂತರ ನಾನು 2019 ಅಕ್ಟೋಬರ್ ನಲ್ಲಿ ನನ್ನ ಗಂಡನ ಮನೆಗೆ ವಾಪಸಾಗಿರುತ್ತೇನೆ. ನಂತರವೂ ಕೂಡ ನನ್ನ ಅತ್ತೆ ನನ್ನೊಂದಿಗೆ ಹೀನಾಯವಾಗಿ ನಡೆದುಕೊಳ್ಳುತ್ತಿದ್ದರು ಮತ್ತು ನನಗೆ ಮಾನಸಿಕ ಹಿಂಸೆ ಕೊಡುತ್ತಿದ್ದರು. ಹಾಗಾಗಿ ನನಗೆ ಜ್ವರ ಬರುತ್ತಿತ್ತು ಮತ್ತು ನಾನು ನನ್ನ ದೇಹದ ತೂಕವನ್ನು ಕಳೆದುಕೊಂಡೆ. ಹಾಗಾಗಿ ನಾನು ಈ ರೀತಿಯ ವೈದ್ಯಕೀಯ ತೊಂದರೆಗಳಿಂದ ಬಳಲುತ್ತಿದ್ದು, ಆದರೂ ಕೂಡ ನನ್ನ ಅತ್ತೆ ನನ್ನ ಮೇಲೆ ದೌರ್ಜನ್ಯ ವನ್ನು ಮಾಡುತ್ತಿದ್ದರು. ಕೆಲವೊಮ್ಮೆ ನನ್ನ ಅತ್ತೆ ನನಗೆ ಹೊಡೆಯುವಷ್ಟು ಕೂಡ ಮುಂದಾಗಿದ್ದರು. ಎಲ್ಲಾ

ವಿಷಯಗಳನ್ನು ನನ್ನ ಗಂಡನಿಗೆ ತಿಳಿಸಿದಾಗ ಆತ ನನ್ನ ತಾಯಿಯ ಮೇಲೆ ದೂರು ಹೇಳತ್ತೀಯ ಎಂದು ನನ್ನ ಮೇಲೆ ಕೋಪಗೊಳ್ಳುತ್ತಿದ್ದರು.

ನಂತರ ಫೆಬ್ರುವರಿ 2020 ರಲ್ಲಿ ಮೇಲೆ ಹೇಳಿದ ಸಮಸ್ಯೆಗಳ ಕಾರಣ ನನ್ನ ಗಂಡ ನನ್ನನ್ನು ಬನ್ನೂರಿನಲ್ಲಿರುವ ನನ್ನ ತವರು ಮನೆಯಲ್ಲಿ ಬಿಟ್ಟು ಹೋಗಿರುತ್ತಾರೆ. ನನಗೆ ನನ್ನ ಗಂಡನ ಮನೆಯಲ್ಲಿ ವಾಸ ಮಾಡುವ ಇಚ್ಛೆ ಇರುತ್ತದೆ. ನಾನು ನನ್ನ ಅಣ್ಣನ ಮನೆಯಲ್ಲಿ ವಾಸ ಇದ್ದು, ಆ ಸಂಧರ್ಭದಲ್ಲಿ ನನಗೆ ಥೈರಾಯ್ಡ್ ಸಮಸ್ಯೆ ಆಗಿರುತ್ತದೆ. ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಎಸ್.ಆರ್. ಎಲ್ ಲ್ಯಾಬರೋಟರಿಯಲ್ಲಿ ತಪಾಸಣೆ ಮಾಡಿಸಿದಾಗ ನನಗೆ ಪಾಪ್ಯುಲರಿ ಕಾರ್ಸಿನೋಮಾ ಎನ್ನುವ ಥೈರಾಯ್ಡ್ ಕ್ಯಾನ್ಸರ್ ಇರುವುದಾಗಿ ನನಗೆ ತಿಳಿದುಬರುತ್ತದೆ. ನಂತರ ನಾನು ಮಣಿಪಾಲ ಆಸ್ಪತ್ರೆಯಲ್ಲೂ ಕೂಡ ಮರು ಪರೀಕ್ಷೆ ಮಾಡಿಕೊಂಡಿದ್ದು, ಅಲ್ಲಿಯೂ ಕೂಡ ನಾನು ನನಗೆ ಥೈರಾಯ್ಡ್ ಕ್ಯಾನ್ಸರ್ ಇರುವುದನ್ನು ದೃಢಪಡಿಸಿಕೊಂಡಿರುತ್ತೇನೆ.

ನಂತರ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಕೊಂಡಾಗ ಅಲ್ಲಿಯೂ ಕೂಡ ಪಾಪ್ಯುಲರಿ ಕಾರ್ಸಿನೋಮಾ ಥೈರಾಯ್ಡ್ ಕ್ಯಾನ್ಸರ್ ಇರುವುದು ದೃಢಪಟ್ಟಿರುತ್ತದೆ. ನಂತರ ನನ್ನ ಗಂಡನ ಮನಯಲ್ಲಿ ಈ ವಿಷಯ ತಿಳಿದು ಎಲ್ಲರಿಗೂ ಶಾಕ್ ಆಗಿರುತ್ತದೆ. ಅವರಿಗೆಲ್ಲರಿಗೂ ಕೂಡ ನನಗಾದ ಕ್ಯಾನ್ಸರ್ ಕಾಯಿಲೆ ಹರಡಬಹುದೆಂದು ಬಾವಿಸಿ ಅವರು ಶಾಕ್ ಆಗಿರುತ್ತದೆ. ಅವರು ನಂತರ ವೈದ್ಯರನ್ನು ಭೇಟಿಯಾಗಿ ಸದರಿ ಕಾಯಿಲೆ ಸಾಂಕ್ರಾಮಿಕ ರೋಗವಲ್ಲ ಎಂದು ವೈದ್ಯರಿಂದ ದೃಢಪಡಿಸಿಕೊಂಡಿರುತ್ತಾರೆ. ನಂತರ ನನ್ನನ್ನು ಅವರು ತೀರ್ವವಾಗಿ ಅವಮಾನಿಸುತ್ತಿದ್ದರು. ನಾನು ನನ್ನ ಗಂಡನ ಮನಯಲ್ಲಿದ್ದಾಗ ನನಗೆ ಅವರು ಬೇರೆ ತಟ್ಟೆ, ಬೇರೆ ಲೋಟ ಕೊಟ್ಟು ನಾನು ಬೇರೆ ಕೊಠಡಿಯಲ್ಲಿರುವಂತೆ ಹೇಳುತ್ತಿದ್ದರು. ಅದೇ ರೀತಿ ನನ್ನ ಮಗುವನ್ನು ಮುಟ್ಟಲು ಕೂಡ ನನಗೆ ಅವಕಾಶ ಕೊಡುತ್ತಿರಲಿಲ್ಲ. ನನಗೆ ಪ್ರೀತಿ, ಕಾಳಜಿ ತೋರಿಸುವ ಸಂಧರ್ಭದಲ್ಲೂ ಕೂಡ ನನಗೆ ಅವಮಾನ ನಿಂದನೆಯನ್ನು ಮಾಡುತ್ತಿದ್ದರು.

ನಂತರ ದಿನಾಂಕ 10.03.2020 ರಲ್ಲಿ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಗೆ ದಾಖಲಾಗುತ್ತೇನೆ. ಮರುದಿನ 11.03.2020 ರಂದು ನನಗೆ ಶಸ್ತ್ರ ಚಿಕಿತ್ಸೆ ಆಗಿರುತ್ತದೆ. ಆ ಸಂದರ್ಭದಲ್ಲೂ ಕೂಡು ಎದುರುದಾರ ಮತ್ತು ನನ್ನ ಮನೆಯವರು ನನ್ನ ಯಾವುದೇ ಅಗತ್ಯತೆಗಳನ್ನು ಪೂರೈಸಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಎಲ್ಲಾ ಅಗತ್ಯತೆಗಳನ್ನು ನನ್ನ ಅಣ್ಣನೇ ಪೂರೈಸಿರುತ್ತಾರೆ. ಶಸ್ತ್ರ ಚಿಕಿತ್ಸೆಯ ನಂತರ ನಾನು ನನ್ನ ಗಂಡನ ಮನೆಗೆ ಹೋದ ಸಂದರ್ಭದಲ್ಲಿ ಅವರಿಗೂ ಕೂಡ ಕ್ಯಾನ್ಸರ್ ಹರಡಬಹುದು ಎನ್ನುವ ಕಾರಣದಿಂದ ನನ್ನನ್ನು ಗಂಡನ ಮನೆಯಲಿ ಇರಲು

ಬಿಡದೆ ತವರು ಮನೆಗೆ ಹೋಗುವಂತೆ ಹೇಳಿರುತ್ತಾರೆ. ಮಗುವನ್ನು ಕೂಡ ಮುಟ್ಟಲು ಕೊಡದೆ ನನ್ನನ್ನು ಮನೆಯಿಂದ ಹೊರಹಾಕಿರುತ್ತಾರೆ.

ಅನಿವಾರ್ಯವಾಗಿ ನನಗೆ ಬೇರೆ ದಾರಿಯಿಲ್ಲದೆ ಮತ್ತೆ ಪುನಃ ನನ್ನ ಅಣ್ಣನ ಮನೆಗೆ ಹೋಗಿರುತ್ತೇನೆ. ವಾರದ ಅಂತ್ಯದಲ್ಲಿ ಮಾತ್ರ ನನ್ನ ಗಂಡ ನನ್ನನ್ನು ಮಾಡನಾಡಿಸುತ್ತಿದ್ದರು. ಆದರೆ ಇದೂವರೆಗೂ ನನ್ನ ಅತ್ತೆ ಮಾವ ಮತ್ತು ಅವರ ಮನೆಯವರು ಯಾರೂ ಕೂಡ ಇಲ್ಲಿಯವರೆಗೂ ನನ್ನನ್ನು ಬಂದು ಮಾತನಾಡಿಸಿರುವುದಿಲ್ಲ. ನನ್ನ ಮಗುವನ್ನು ವೀಡಿಯೋ ಕಾಲ್ ನಲಲ್ಲಾಗಲಿ ಅಥವಾ ನೇರವಾಗಿಯಾಗಲೀ ಇಲ್ಲಿಯವರೆಗೂ ನನಗೆ ಯಾವುದೇ ಅವಕಾಶ ಕಲ್ಪಿಸಿ ಕೊಟ್ಟಿರುವುದಿಲ್ಲ. ನಾನು ಎಷ್ಟೆ ಮನವಿ ಮಾಡಿಕೊಂಡರೂ ಸಹ ನನಗೆ ನನ್ನ ಮಗುವನ್ನು ಮಾತನಾಡಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ.

ನಂತರ ನನ್ನ ಗಂಡ ನನ್ನನ್ನು ನನ್ನ ತಾಯಿ ಮನೆಯಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನೊಂದಿಗೆ ನನ್ನ ಅಣ್ಣಂದಿರನ್ನೂ ಸಹ ಕರೆದುಕೊಂಡು ಬಂದಿರುತ್ತಾರೆ. ನನ್ನ ಅತ್ತೆ ಮಾವನಿಗೆ ನನ್ನನ್ನು ಮನೆಗೆ ಸೇರಿಸಿಕೊಳ್ಳಲು ಇಷ್ಟ ಇಲ್ಲದಿದ್ದರೂ ಸಹ ನನ್ನ ಅಣ್ಣಂದಿರ ಮಾತು ಕೇಳಿ ಅವರ ಒತ್ತಡಕ್ಕೆ ಒಳಗಾಗಿ ನನ್ನನ್ನು ಮನೆ ಸೇರಿಸಿಕೊಳ್ಳುತ್ತಾರೆ. ಇದೇ ಸಂದರ್ಭದಲ್ಲಿ ಕಿದ್ವಾಯಿ ಆಸ್ಪತ್ರೆಯ ವೈದ್ಯರು ನನಗೆ ಕೆಲವೊಂದು ಔಷಧೋಪಚಾರವನ್ನು ಸೂಚಿಸಿದ್ದು ಅದರಂತೆ 11 ಭಾರಿ ರೇಡಿಯೋ ಅಯೋಡಿನ್ ನೀಡಲು ಕೇಳಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಕಟ್ಟುನಿಟ್ಟಿನ ಆಹಾರ ಕ್ರಮವನ್ನು ಹೇಳಿರುತ್ತಾರೆ. ನನಗೆ ಪ್ರೀತಿ ವಿಶ್ವಾಸ ತೋರಿಸಬೇಕಾದ ನನ್ನ ಗಂಡನ ಮನೆಯವರು ನನಗೆ ಕಾಳಜಿ ತೋರಿಸದೆ ಪೋಷಕಾಂಶ ಆಹಾರವನ್ನು ಕೊಡುತ್ತಿರಲಿಲ್ಲ. ಆ ಸಂದರ್ಭದಲ್ಲೂ ಕೂಡ ನನಗೆ ಪ್ರತ್ಯೇಕ ತಟ್ಟೆ, ಲೋಟ ಕೊಡುತ್ತಿದ್ದರು. ಮಗುವನ್ನು ಮಾತನಾಡಿಸಲು ಮತ್ತು ಸ್ಪರ್ಶಿಸಲು ಅವರು ನನಗೆ ಬಿಡುತ್ತಿರಲಿಲ್ಲ. ಈ ಎಲ್ಲಾ ಪರಿಸ್ಥಿತಿಗಳ ನಡುವೆ ನನ್ನ ಗಂಡ ನನಗೆ ಕೇವಲ ಎರಡು ಮಾತ್ರ ರೇಡಿಯೋ ಅಯೋಡಿನ್ ಕೊಡಿಸಿರುತ್ತಾರೆ. ನಂತರ ನನ್ನ ಗಂಡ ನನಗೆ ಯಾವುದೇ ರೀತಿಯ ಚಿಕಿತ್ಸೆಯನ್ನು ಕೊಡಿಸುವುದಿಲ್ಲ ಮತ್ತು ಅದರ ವೆಚ್ಚನ್ನು ಭರಿಸುವುದಿಲ್ಲ ಮತ್ತು ಆಸ್ಪತ್ರೆಗೂ ಕೂಡ ಕರೆದುಕೊಂಡು ಹೋಗುವುದಿಲ್ಲ ಎಂದು ಹೇಳಿರುತ್ತಾರೆ. ನಾನು ನನ್ನ ಅತ್ತೆ ಮಾವನಿಗೆ ಸದರಿ ವಿಚಾರವನ್ನು ತಿಳಿಸಿದರೂ ಕೂಡ ಅವರೂ ಕೂಡ ಅವರ ಮಗನ ನಿರ್ಧಾರವೇ ಸರಿ ಎಂದು ಹೇಳಿರುತ್ತಾರೆ. ನನಗೆ ಮೊದಲೇ ಕ್ಯಾನ್ಸ ರ್ ಇರುವುದು ಗೊತ್ತಿದ್ದರೂ ಸಹ ಅದನ್ನು ಮುಚ್ಚಿಟ್ಟು ಮದುವೆ ಮಾಡಿಸಿರುತ್ತಾರೆ ಎಂದು ನನ್ನ ಮೇಲೆ ತಪ್ಪು ಹೊರಿಸಿರುತ್ತಾರೆ ಮತ್ತು ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ನನ್ನ ಅಣ್ಣಂದಿರಿಗೆ ತಿಳಿಸಿದಾಗ ಅವರ ಮೇಲೂ ಕೂಡ ನಿಂದನೆ ಮಾಡಿ ನೀವು ಸತ್ಯವನ್ನುಮುಚ್ಚಿಟ್ಟು ಮದುವೆ ಮಾಡಿಸಿರುತ್ತೀರಾ ಎಂದು ಹೇಳಿರುತ್ತಾರೆ. ನನ್ನ ಅಣ್ಣಂದಿರು ಅವರ

ಬಳಿ ನನ್ನನ್ನು ಕಾಳಜಿಯಿಂದ ನೋಡಿಕೊಳ್ಳುವಂತೆ ಕೇಳಿಕೊಂಡರೂ ಕೂಡ ನಿಮ್ಮ ತಂಗಿ ಇಲ್ಲಿ ಇರುವುದು ಬೇಡ ನೀವು ಬಂದು ಕರೆದುಕೊಂಡು ಹೋಗಿ ಎಂದು ಕಡಾಖಂಡಿತವಾಗಿ ಹೇಳಿರುತ್ತಾರೆ. ಎಷ್ಟೇ ಸಂದಾಯದ ಮಾತುಗಳನ್ನು ಹೇಳಿದರೂ ಕೂಡ ಅವರು ಮಗುವನ್ನು ನನಗೆ ಕೊಡಲು ಒಪ್ಪುವುದಿಲ್ಲ. ನಂತರ ಬಲವಂತವಾಗಿ ನನ್ನನ್ನು ನನ್ನ ತವರು ಮನೆಗೆ ಕಳುಹಿಸಿರುತ್ತಾರೆ. ತವರುಮನೆಯವರ ಆರೈಕೆಯಿಂದ ನಾನು ಕ್ಯಾನ್ಸರ್ ನಿಂದ ಸಂಪೂರ್ಣ ವಾಗಿ ಗುಣಮುಖ ಹೊಂದಿರುತ್ತೇನೆ. ಅದಕ್ಕೆ ವೈದ್ಯರು ಕೂಡ ದೃಢೀಕರಣ ಕೊಟ್ಟಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಅರ್ಜಿದಾರರ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓದಿ ಹೇಳಿ ಕೇಳಿ ಸರಿಯಾಗಿದೆ.**

(ಸಚಿನ್ ಹೆಚ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಟಿ.ನರಸೀಪುರ .